■ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮಪಂಚಾಯಿತಿ ಮಟ್ಟದಲ್ಲಿ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ರೈತರಿಗೆ ಮತ್ತು ಸ್ವಯಂ ಸೇವಕರುಗಳಿಗೆ ಉಪಚಾರ ಕ್ರಮದ ಬಗ್ಗೆ, ವ್ಯಾಪಕವಾಗಿ ತರಬೇತಿ ನೀಡಲಾಯಿತು.

■ ಸಸ್ಯ ಸಂರಕ್ಷಣಾ ಔಷಧಿಗಳು ಹಾಗೂ ಪರಿಕರಗಳನ್ನು ರೈತರಿಗೆ ಉಚಿತವಾಗಿ ಸರಬರಾಜು ಮಾಡಲಾಯಿತು.

■ ಸಸ್ಯ ಸಂರಕ್ಷಣಾ ಔಷಧಿಗಳನ್ನು ಕರ್ನಾಟಕ ಕೃಷಿ ಕೈಗಾರಿಕಾ ನಿಗಮ, ಕರ್ನಾಟಕ ತೋಟಗಾರಿಕೆ ಮಹಾಮಂಡಳ ಮತ್ತು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ಇವರ ಮುಖಾಂತರ ಸರಬರಾಜು ಪಡೆಯಲಾಯಿತು.

■ ಸಸ್ಯ ಸಂರಕ್ಷಣಾ ಔಷಧಿಗಳನ್ನು ತಾಲ್ಲೂಕು : ಗ್ರಾಮಪಂಚಾಯಿತಿ ಕೇಂದ್ರಗಳಲ್ಲಿ ದಾಸ್ತಾನು ಮಾಡಿ, ದಿನಾಂಕ: 16-1-2002 ರಿಂದ 30-04-2002 ರವರೆಗೆ 1.20 ಕೋಟಿ ತೆಂಗಿನ ಮರಗಳಿಗೆ ಉಪಚರಿಸಲಾಯಿತು. ಹಾಗೂ ರೂ. 1144 ಕೋಟಿ ಖರ್ಚು ಮಾಡಲಾಗಿದೆ (ಕೇಂದ್ರ ಸರ್ಕಾರದ ಪಾಲು ರೂ. 7.40 ಕೋಟಿ ಮತ್ತು ರಾಜ್ಯ ಸರ್ಕಾರದ ಪಾಲು ರೂ. 4.04 ಕೋಟಿ).

■ ಉಪಚಾರ ಕಾರ್ಯಕ್ರಮದ ಮುಂಚಿತವಾಗಿ ಹಾಗೂ ಉಪಚರಿಸಿದ ನಂತರ ನುಸಿ ಹತೋಟಿಯ ಮೌಲ್ಯಮಾಪನ ತಿಳಿಯಲು ಕೃಷಿ ವಿಶ್ವವಿದ್ಯಾನಿಲಯದ ಕೀಟತಜ್ಞರನ್ನು ಕೋರಿಕೊಳ್ಳಲಾಗಿದೆ.

■ ನುಸಿ ನಿಯಂತ್ರಣೆಗೆ ಸಮಗ್ರ ಪರಿಸರ ಪೂರಕ ತೆಂಗು ಬೇಸಾಯ ಕ್ರಮಗಳನ್ನು ಅಳವಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಂಗಳೂರು ನಗರದ ಮಾಗಡಿ ರಸ್ತೆಯಲ್ಲಿರುವ ವಿನಾಯಕ ಗೃಹ ನಿರ್ಮಾಣ ಸಹಕಾರ ಸಂಘ

705(713) ಎ.ಎಸ್. ಗುರುಸ್ವಾಮಿ(ಚಾಮುಂಡೇಶ್ವರಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದ ಮಾಗಡಿ ರಸ್ತೆಯಲ್ಲಿ ಇರುವ ವಿನಾಯಕ ಗೃಹ ನಿರ್ಮಾಣ ಸಹಕಾರ ಸಂಘದವರು ನಾಗರಭಾವಿಯಲ್ಲಿ ರಚಿಸಿರುವ ಲೇ ಔಟಿನಲ್ಲಿರುವ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟಿರುವ ಸಿ.ಎ. ಸೈಟುಗಳನ್ನು ಕಾನೂನು ಬಾಹಿರವಾಗಿ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅಂಥ ಅಕ್ರಮ ಹಂಚಿಕೆಯನ್ನು ರದ್ದುಪಡಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) :

ಅ) ಬೆಂಗಳೂರು ನಗರದ ಮಾಗಡಿ ರಸ್ತೆಯಲ್ಲಿ ವಿನಾಯಕ ಗೃಹ ನಿರ್ಮಾಣ ಸಹಕಾರ ಸಂಘ (ನಿ) ಎಂಬ ಹೆಸರಿನ ಸಂಘವು ಕಾರ್ಯ ನಿರ್ವಹಿಸುತ್ತಿಲ್ಲ.

ಆ) ಉದ್ಭವಿಸುವುದಿಲ್ಲ.